**All India Radio: Bangalore**
**National Bulletin In Kannada**
**09.08.2026 19.35 hrs**
**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**09.08.2026 19.35 hrs**

ಮುಖ್ಯಾಂಶಗಳು

೧. ಹರ್ ಘರ್ ತಿರಂಗಾ ಅಭಿಯಾನದಲ್ಲಿ ಪಾಲ್ಗೊಂಡು ವಿಕಸಿತ ಭಾರತ ನಿರ್ಮಾಣ ಸಂಕಲ್ಪಕ್ಕೆ ಬದ್ಧರಾಗಲು ಪ್ರಧಾನಿ ನರೇಂದ್ರ ಮೋದಿ ಕರೆ

೨. ಸದೃಢ ಪಾರದರ್ಶಕ ಮತ್ತು ವಿಶ್ವಾಸಾರ್ಹ ಪರೀಕ್ಷಾ ವ್ಯವಸ್ಥೆಯ ನಿರ್ಮಾಣ ಸರ್ಕಾರದ ಗುರಿ ಕೇಂದ್ರ ಶಿಕ್ಷಣ ಸಚಿವ ಪ್ರಲ್ಹಾದ್ ಜೋಶಿ

೩. ಪಿಎಂ ಆವಾಸ್ ಯೋಜನೆ-ನಗರ ಅಡಿಯಲ್ಲಿ ಒಂದು ಕೋಟಿ ೨೫ ಲಕ್ಷಕ್ಕೂ ಹೆಚ್ಚು ಮನೆಗಳ ಮಂಜೂರು ; ಕೇಂದ್ರ ವಸತಿ ಸಚಿವಾಲಯ ಮಾಹಿತಿ

೪. ರಷ್ಯಾ-ಉಕ್ರೇನ್ ಪರಸ್ಪರ ದಾಳಿ: ನಾಗರಿಕರ ಸಾವು, ಉಕ್ರೇನ್‌ಗೆ ಕ್ಷಿಪಣಿ ಪೂರೈಸಲು ಅಮೆರಿಕ ಸಮ್ಮತಿ

೫. ಕೆನಡಿಯನ್ ಓಪನ್ ಟೆನಿಸ್ ಪಂದ್ಯಾವಳಿ ; ಪುರುಷರ ಡಬಲ್ಸ್ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಭಾರತದ ಯುಕಿ ಭಾಂಬ್ರಿ, ಕಣದಲ್ಲಿ

---

ಹರ್ ಘರ್ ತಿರಂಗಾ ಅಭಿಯಾನಕ್ಕೆ ಇಂದು ಚಾಲನೆ ದೊರೆತಿದ್ದು, ಈ ಅಭಿಯಾನ ಇದೇ ೧೬ ರವರೆಗೆ ನಡೆಯಲಿದೆ. ನಾಗರಿಕರು, ರಾಷ್ಟ್ರ ಧ್ವಜವನ್ನು ಹಾರಿಸಲು ಹಾಗೂ ದೇಶಭಕ್ತಿ, ರಾಷ್ಟ್ರೀಯ ಏಕತೆ ಮತ್ತು ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಆಚರಿಸುವ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸುವುದು ಈ ಉಪಕ್ರಮದ ಗುರಿಯಾಗಿದೆ.

ಈ ವರ್ಷದ ಅಭಿಯಾನವು ಭಾರತದ ರಾಷ್ಟ್ರೀಯ ಗೀತೆ "ವಂದೇ ಮಾತರಂ" ನ ೧೫೦ ನೇ ವಾರ್ಷಿಕೋತ್ಸವದೊಂದಿಗೆ ಮೇಳೈಸಿರುವುದರಿಂದ ವಿಶೇಷ ಮಹತ್ವ ಪಡೆದಿದೆ. ಆಚರಣೆಗಳ ಭಾಗವಾಗಿ, ದೇಶಾದ್ಯಂತ ವಂದೇ ಮಾತರಂನ ಸಾಮೂಹಿಕ ಗಾಯನವನ್ನು ಆಯೋಜಿಸಲಾಗುತ್ತಿದೆ. ೨೦೦ ಕ್ಕೂ ಹೆಚ್ಚು ಭಾರತೀಯ ರಾಯಭಾರ ಕಚೇರಿಗಳು, ಹೈಕಮಿಷನ್‌ಗಳು ಮತ್ತು ದೂತಾವಾಸ ಕಚೇರಿಗಳು ಅಭಿಯಾನವನ್ನು ಗುರುತಿಸಲು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಿವೆ. ವಿಶೇಷವಾಗಿ ಸೂರ್ಯ ಪಥ ತಿರಂಗಾ ಡಿಜಿಟಲ್ ರಿಲೇ ಇದೇ ೧೫ ರಂದು ಫಿಜಿಯಲ್ಲಿರುವ ಭಾರತದ ರಾಜತಾಂತ್ರಿಕ ಕಚೇರಿಯಿಂದ ಪ್ರಾರಂಭವಾಗಿ ಸ್ಯಾನ್ ಫ್ರಾನ್ಸಿಸ್ಕೋದ ಭಾರತೀಯ ಕಾನ್ಸುಲೇಟ್ ಜನರಲ್‌ನಲ್ಲಿ ಮುಕ್ತಾಯಗೊಳ್ಳಲಿದೆ.

---

’ಹರ್ ಘರ್ ತಿರಂಗಾ’ ಅಭಿಯಾನದಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ’ವಿಕಸಿತ ಭಾರತ’ ನಿರ್ಮಾಣಕ್ಕೆ ಕೊಡುಗೆ ನೀಡುವ ಸಾಮೂಹಿಕ ಸಂಕಲ್ಪವನ್ನು ಪುನರುಜ್ಜೀವನಗೊಳಿಸಬೇಕೆಂದು ಪ್ರಧಾನಮಂತ್ರಿ ನರೇಂದ್ರ ಮೋದಿ ದೇಶದ ಸಮಸ್ತ ಜನತೆಗೆ ಕರೆ ನೀಡಿದ್ದಾರೆ.
ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ಅವರು, ತ್ರಿವರ್ಣ ಧ್ವಜ ರಾಷ್ಟ್ರದ ಹೆಮ್ಮೆಯ ಸಂಕೇತವಾಗಿದ್ದು, ದೇಶಕ್ಕಾಗಿ ಸದಾ ಅತ್ಯುತ್ತಮ ಸೇವೆಯನ್ನು ನೀಡಲು ಪ್ರೇರಣೆಯ ಮೂಲವಾಗಿದೆ ಎಂದು ತಿಳಿಸಿದ್ದಾರೆ.
ಈ ವರ್ಷ ರಾಷ್ಟ್ರೀಯ ಗೀತೆ ’ವಂದೇ ಮಾತರಂ’ ತನ್ನ ೧೫೦ನೇ ವರ್ಷಾಚರಣೆಯನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ, ಪ್ರಸಕ್ತ ವರ್ಷದ ’ಹರ್ ಘರ್ ತಿರಂಗಾ’ ಪ್ರಕ್ರಿಯೆಗಳನ್ನು ’ವಂದೇ ಮಾತರಂ’ ಗೀತೆಗೆ ಸಮರ್ಪಿಸಲಾಗುತ್ತಿದೆ ಎಂದು ಪ್ರಧಾನಿ ಸಂತಸ ವ್ಯಕ್ತಪಡಿಸಿದ್ದಾರೆ.

---

ಹರ್ ಘರ್ ತಿರಂಗಾ' ಅಭಿಯಾನದ ಭಾಗವಾಗಿ ಉಪರಾಷ್ಟ್ರಪತಿ ಸಿ. ಪಿ. ರಾಧಾಕೃಷ್ಣನ್ ಅಂಡಮಾನ್-ನಿಕೋಬಾರ್ ರಾಜಧಾನಿ ಶ್ರೀವಿಜಯಪುರಂನಲ್ಲಿ ಇಂದು ರಾಷ್ಟ್ರಧ್ವಜಾರೋಹಣ ನೆರವೇರಿಸಿ, ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವ ನಮನ ಸಲ್ಲಿಸಿದರು. ಬಳಿಕ ಡಾ. ಬಿ. ಆರ್. ಅಂಬೇಡ್ಕರ್ ತಂತ್ರಜ್ಞಾನ ಸಂಸ್ಥೆಯಲ್ಲಿ ನಡೆದ 'ವಂದೇ ಮಾತರಂ ತಿರಂಗಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸೆಲ್ಯುಲಾರ್ ಜೈಲಿನ ಐತಿಹಾಸಿಕ ಮಹತ್ವ ಹಾಗೂ ೧೯೪೩ ಡಿಸೆಂಬರ್ ೩೦ ರಂದು ನೇತಾಜಿ ಸುಭಾಷ್ ಚಂದ್ರ ಬೋಸ್ ಅವರು ಪ್ರಥಮ ಬಾರಿಗೆ ತ್ರಿವರ್ಣ ಧ್ವಜ ಹಾರಿಸಿದ ಘಟನೆಯನ್ನು ಸ್ಮರಿಸಿದರು. 'ವಂದೇ ಮಾತರಂ' ಗೀತೆಯು ಸ್ವಾತಂತ್ರ್ಯ ಚಳವಳಿಯಲ್ಲಿ ಒಗ್ಗಟ್ಟನ್ನು ಮೂಡಿಸಿತು ಎಂದ ಅವರು, ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆ ನಡುವೆ ಸಮತೋಲನ ಕಾಯ್ದುಕೊಳ್ಳಲು ಕರೆ ನೀಡಿದರು. ಎರಡು ದಿನಗಳ ಪ್ರವಾಸದಲ್ಲಿರುವ ಉಪರಾಷ್ಟ್ರಪತಿಗಳು ನಿನ್ನೆ ಸೆಲ್ಯುಲಾರ್ ಜೈಲು ಹಾಗೂ ವೀರ ಸಾವರ್ಕರ್ ಅವರ ಕೊಠಡಿಗೆ ಭೇಟಿ ನೀಡಿದ್ದರು.

---

ಕೇಂದ್ರ ಗೃಹ ಸಚಿವ ಅಮಿತ್ ಶಾ ಪುದುಚೇರಿಯಲ್ಲಿಂದು 'ಹರ್ ಘರ್ ತಿರಂಗಾ' ಯಾತ್ರೆಗೆ ಚಾಲನೆ ನೀಡಿದರು.

ಇದಕ್ಕೂ ಮುನ್ನ ಗೊರಿಮೇಡು ಪೊಲೀಸ್ ತರಬೇತಿ ಶಾಲೆಯ ಮೈದಾನದಲ್ಲಿ ನಡೆದ ಸಮಾರಂಭದಲ್ಲಿ ಸಚಿವರು, ಪುದುಚೇರಿ ಪೊಲೀಸ್ ಪಡೆಗೆ ಅತ್ಯುನ್ನತ 'ರಾಷ್ಟ್ರಪತಿಯವರ ಪೊಲೀಸ್ ಕಲರ್' ಗೌರವ ಪ್ರಧಾನ ಮಾಡಿದರು. ೫ ಸಾವಿರಕ್ಕಿಂತ ಕಡಿಮೆ ಸಿಬ್ಬಂದಿ ಹೊಂದಿದ್ದರೂ ಪುದುಚೇರಿಯ ಆಂತರಿಕ ಭದ್ರತೆ ಮತ್ತು ಹೆಮ್ಮೆಯನ್ನು ಕಾಯುತ್ತಿರುವ ಪೊಲೀಸ್ ಪಡೆಯ ಸೇವೆಯನ್ನು ಅವರು ಶ್ಲಾಘಿಸಿದರು. ಈ ಗೌರವ ಪಡೆದ ದೇಶದ ೧೮ನೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶವಾಗಿ ಪುದುಚೇರಿ ಹೊರಹೊಮ್ಮಿದೆ. ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಎನ್. ರಂಗಸಾಮಿ ಹಾಗೂ ಪೊಲೀಸ್ ಮಹಾನಿರ್ದೇಶಕಿ ಶಾಲಿನಿ ಸಿಂಗ್ ಉಪಸ್ಥಿತರಿದ್ದರು.

---

ಕೇಂದ್ರ ಶಿಕ್ಷಣ ಸಚಿವ ಪ್ರಲ್ಹಾದ್ ಜೋಶಿ ಅವರು ಇಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆಗೆ ಸಂಬಂಧಿಸಿದ ವಿಷಯಗಳ ಕುರಿತು ಶಿಕ್ಷಣ ಸಚಿವಾಲಯದ ಕಾರ್ಯದರ್ಶಿ ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಸಭೆ ನಡೆಸಿದರು.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡ ಸಚಿವರು, ಸಾಂಸ್ಥಿಕ ವ್ಯವಸ್ಥೆಯನ್ನು ಬಲಪಡಿಸಲು, ಪರೀಕ್ಷಾ ಪ್ರಕ್ರಿಯೆಗಳನ್ನು ಸುಗಮಗೊಳಿಸಲು ಹಾಗೂ ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಶೀಘ್ರವಾಗಿ ಸ್ಪಂದಿಸಲು ಅಗತ್ಯವಿರುವ ಪ್ರಮುಖ ವಿಷಯಗಳ ಕುರಿತು ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿದೆ ಎಂದು ತಿಳಿಸಿದ್ದಾರೆ.

ಪ್ರತಿಯೊಬ್ಬ ವಿದ್ಯಾರ್ಥಿಯ ಆಕಾಂಕ್ಷೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಸದೃಢ, ಪಾರದರ್ಶಕ ಮತ್ತು ವಿಶ್ವಾಸಾರ್ಹ ಪರೀಕ್ಷಾ ವ್ಯವಸ್ಥೆಯನ್ನು ನಿರ್ಮಿಸುವುದೇ ಸರ್ಕಾರದ ಮುಖ್ಯ ಗುರಿಯಾಗಿದೆ ಎಂದು ಸಚಿವ ಪ್ರಲ್ಹಾದ್ ಜೋಶಿ ಈ ಸಂದರ್ಭದಲ್ಲಿ ಸ್ಪಷ್ಟಪಡಿಸಿದರು.

---

ಪ್ರಧಾನಮಂತ್ರಿ ಆವಾಸ್ ಯೋಜನೆ-ನಗರ ಮತ್ತು ಪ್ರಧಾನಮಂತ್ರಿ ಆವಾಸ್ ಯೋಜನೆ-ನಗರ ೨.೦ ಅಡಿಯಲ್ಲಿ ಇದುವರೆಗೆ ೧ ಕೋಟಿ ೨೫ ಲಕ್ಷಕ್ಕೂ ಹೆಚ್ಚು ಮನೆಗಳನ್ನು ಮಂಜೂರು ಮಾಡಲಾಗಿದೆ ಎಂದು ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ಇವುಗಳಲ್ಲಿ ೧ ಕೋಟಿಗೂ ಹೆಚ್ಚು ಮನೆಗಳ ನಿರ್ಮಾಣ ಪೂರ್ಣಗೊಂಡು ದೇಶಾದ್ಯಂತ ಫಲಾನುಭವಿಗಳಿಗೆ ಹಸ್ತಾಂತರಿಸಲಾಗಿದ್ದು, ಸುಮಾರು ೧ ಕೋಟಿ ಮನೆಗಳನ್ನು ಮಹಿಳೆಯರ ಹೆಸರಿಗೆ ನೀಡಲಾಗಿದೆ.

೧೬ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಕುಟುಂಬಗಳಿಗಾಗಿ ಪಿಎಂ ಆವಾಸ್ ಯೋಜನೆ-ನಗರ ೨.೦ ಅಡಿಯಲ್ಲಿ ೨ ಲಕ್ಷ ೯ ಸಾವಿರಕ್ಕೂ ಹೆಚ್ಚು ಮನೆಗಳನ್ನು ಮಂಜೂರು ಮಾಡಲಾಗಿದೆ. ಇವುಗಳಲ್ಲಿ ೨ ಲಕ್ಷ ೩ ಸಾವಿರಕ್ಕೂ ಹೆಚ್ಚು ಮನೆಗಳನ್ನು ಮಹಿಳೆಯರಿಗೆ ಹಂಚಿಕೆ ಮಾಡಲಾಗಿದೆ.

ಕೇಂದ್ರ ಮಂಜೂರಾತಿ ಮತ್ತು ಉಸ್ತುವಾರಿ ಸಮಿತಿಯ ಸಭೆಯಲ್ಲಿ ಯೋಜನೆಯ ಪ್ರಗತಿಯನ್ನು ಪರಿಶೀಲಿಸಿದ ವಸತಿ ಮತ್ತು ನಗರ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿ ಸತ್ಯೇಂದ್ರ ಸಿಂಗ್, ಪ್ರತಿಯೊಬ್ಬ ಅರ್ಹ ನಗರ ಕುಟುಂಬಕ್ಕೂ ಯೋಜನೆಯ ಲಾಭ ತಲುಪುವುದನ್ನು ಖಚಿತಪಡಿಸಿಕೊಳ್ಳಲು ಯೋಜನೆಯ ಸಮಯೋಚಿತ ಅನುಷ್ಠಾನ, ನಿಧಿ ಬಿಡುಗಡೆ, ಪರಿಣಾಮಕಾರಿ ಮೇಲ್ವಿಚಾರಣೆ ಹಾಗೂ ಎಲ್ಲಾ ಭಾಗೀದಾರರ ನಡುವೆ ನಿಕಟ ಸಮನ್ವಯದ ಅಗತ್ಯವಿದೆ ಎಂದರು.

---

ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವ ಪ್ರಲ್ಹಾದ್ ಜೋಶಿ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯ ಕಾರ್ಯದರ್ಶಿ ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಪರಿಶೀಲನಾ ಸಭೆ ನಡೆಸಿದರು. ಪ್ರಸ್ತುತ ಸಕ್ಕರೆ ಋತುವಿನಲ್ಲಿ ದೇಶದಲ್ಲಿರುವ ಸಕ್ಕರೆಯ ದಾಸ್ತಾನು ಸ್ಥಿತಿ, ಉತ್ಪಾದನಾ ಮಟ್ಟ ಮತ್ತು ಒಟ್ಟು ಅಗತ್ಯತೆಗಳ ಕುರಿತು ಸಭೆಯಲ್ಲಿ ವಿವರವಾಗಿ ಪರಾಮರ್ಶಿಸಲಾಯಿತು.
ಸಕ್ಕರೆಯ ಲಭ್ಯತೆಯ ಮೇಲೆ ನಿರಂತರ ನಿಗಾವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ ಸಚಿವರು, ಮಾರುಕಟ್ಟೆಯಲ್ಲಿ ಸಕ್ಕರೆಯ ಕೊರತೆಯಾಗದಂತೆ ಮತ್ತು ಇಡೀ ಋತುವಿನುದ್ದಕ್ಕೂ ಸುಗಮ ಹಾಗೂ ಸ್ಥಿರ ಪೂರೈಕೆಯನ್ನು ಕಾಯ್ದುಕೊಳ್ಳಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಪ್ರತಿಪಾದಿಸಿದರು.

---

ರಷ್ಯಾ ಮತ್ತು ಉಕ್ರೇನ್ ನಡುವೆ ನಡೆದ ರಾತ್ರೋರಾತ್ರಿ ದಾಳಿಗಳಲ್ಲಿ ಹಲವು ನಾಗರಿಕರು ಮೃತಪಟ್ಟಿದ್ದಾರೆ.
ರಷ್ಯಾದ ಬೆಲ್ಗೊರೊಡ್‌ನಲ್ಲಿ ಉಕ್ರೇನ್ ಡ್ರೋನ್ ದಾಳಿಗೆ ಐವರು ಮೃತಪಟ್ಟು ೨೪ ಜನರು ಗಾಯಗೊಂಡಿದ್ದಾರೆ. ಇತ್ತ ಉಕ್ರೇನ್‌ನ ಖಾರ್ಕಿವ್ ವಸತಿ ಪ್ರದೇಶದ ಮೇಲೆ ರಷ್ಯಾ ನಡೆಸಿದ ಕ್ಷಿಪಣಿ ದಾಳಿಯಲ್ಲಿ ಇಬ್ಬರು ಮೃತಪಟ್ಟು, ಒಡೆಸ್ಸಾದಲ್ಲಿ ಎಂಟು ಜನರು ಗಾಯಗೊಂಡಿದ್ದಾರೆ. ಉಕ್ರೇನ್‌ನ ೧೫೩ ಡ್ರೋನ್‌ಗಳನ್ನು ಹೊಡೆದುರುಳಿಸಿರುವುದಾಗಿ ರಷ್ಯಾ ಪ್ರತಿಪಾದಿಸಿದೆ. ಮತ್ತೊಂದೆಡೆ, ಉಕ್ರೇನ್ ತನ್ನ 'ಪೇಟ್ರಿಯಾಟ್' ರಕ್ಷಣಾ ವ್ಯವಸ್ಥೆಗೆ ಅಗತ್ಯವಿರುವ ಕ್ಷಿಪಣಿಗಳನ್ನು ಪ್ರತಿ ತಿಂಗಳು ಪೂರೈಸಲು ಅಮೆರಿಕದೊಂದಿಗೆ ಒಪ್ಪಂದ ಮಾಡಿಕೊಂಡಿದೆ ಎಂದು ಸರ್ಬಿಯಾ ಪ್ರವಾಸದಲ್ಲಿರುವ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಸ್ಪಷ್ಟಪಡಿಸಿದ್ದಾರೆ.

---

ಫುಕೆಟ್‌ನಿಂದ ದೆಹಲಿಗೆ ಪ್ರಯಾಣಿಸುತ್ತಿದ್ದ ಏರ್ ಇಂಡಿಯಾ ವಿಮಾನ ಆಗಸದಲ್ಲಿ ಇದ್ದಕ್ಕಿದ್ದಂತೆ ೩೦೦ ಅಡಿ ಕೆಳಕ್ಕೆ ಕುಸಿದ ಗಂಭೀರ ಪ್ರಕರಣದ ಕುರಿತು ವಿಮಾನ ಅಪಘಾತ ತನಿಖಾ ಸಂಸ್ಥೆ-ಎಎಐಬಿ ತನಿಖೆ ಆರಂಭಿಸಿದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯ ತಿಳಿಸಿದೆ. ಈ ಘಟನೆಯಲ್ಲಿ ಕೆಲವು ಪ್ರಯಾಣಿಕರು ಹಾಗೂ ಸಿಬ್ಬಂದಿಗೆ ಗಾಯಗಳಾಗಿದ್ದವು. ತನಿಖೆಯ ಭಾಗವಾಗಿ ನಡೆಸಲಾದ ಮಾದಕ ದ್ರವ್ಯ ತಪಾಸಣೆಯಲ್ಲಿ ಕಮಾಂಡರ್ ಪೈಲಟ್ ಅವರ ವರದಿಯಲ್ಲಿ ಹೆಚ್ಚಿನ ದೃಢೀಕರಣ ಪರೀಕ್ಷೆಯ ಅಗತ್ಯವಿರುವುದು ಕಂಡು ಬಂದಿದ್ದು, ಮಾದರಿಗಳನ್ನು ಹೆಚ್ಚಿನ ವಿಶ್ಲೇಷಣೆಗೆ ಕಳುಹಿಸಲಾಗಿದೆ. ತನಿಖೆ ಪೂರ್ಣಗೊಳ್ಳುವವರೆಗೆ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ-ಡಿಜಿಸಿಎ, ಇಬ್ಬರೂ ಪೈಲಟ್‌ಗಳನ್ನು ಸೇವಾ ಕರ್ತವ್ಯದಿಂದ ಮುಕ್ತಗೊಳಿಸಿದ್ದು, ಅಂತಿಮ ವರದಿ ಆಧಾರದ ಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವಾಲಯ ತಿಳಿಸಿದೆ.

---

ಭಾರತ ಮತ್ತು ಅಮೆರಿಕ ನೌಕಾಪಡೆಗಳ ಜಂಟಿ ಸ್ಫೋಟಕ ವಸ್ತುಗಳ ವಿಲೇವಾರಿ ಸಮರಾಭ್ಯಾಸ ೨೦೨೬ ನಾಳೆಯಿಂದ ಇದೇ ೧೪ರವರೆಗೆ ಕೊಚ್ಚಿಯ ದಕ್ಷಿಣ ನೌಕಾ ಕಮಾಂಡರ್‌ನಲ್ಲಿ ನಡೆಯಲಿದೆ.
ಉಭಯ ರಾಷ್ಟ್ರಗಳ ನೌಕಾಪಡೆಗಳ ನುರಿತ ಡೈವಿಂಗ್ ಮತ್ತು ಸ್ಫೋಟಕ ವಸ್ತುಗಳ ವಿಲೇವಾರಿ ತಂಡಗಳ ನಡುವೆ ವೃತ್ತಿಪರ ಸಹಕಾರ ಬಲಪಡಿಸುವುದು ಹಾಗೂ ಕಾರ್ಯಾಚರಣಾ ಸಾಮರ್ಥ್ಯ ಹೆಚ್ಚಿಸುವುದು ಇದರ ಉದ್ದೇಶವಾಗಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಐದು ದಿನಗಳ ಕಾಲ ನಡೆಯುವ ಈ ಕವಾಯತಿನಲ್ಲಿ ವಿಷಯ ತಜ್ಞರ ವಿಚಾರ ವಿನಿಮಯ, ಪರಸ್ಪರ ತರಬೇತಿ, ಉಪಕರಣಗಳ ಪ್ರಾತ್ಯಕ್ಷಿಕೆ ಮತ್ತು ನೈಜ ಸನ್ನಿವೇಶ ಆಧಾರಿತ ಪ್ರಾಯೋಗಿಕ ಅಭ್ಯಾಸಗಳು ಒಳಗೊಂಡಿರಲಿವೆ. ಉಭಯ ರಾಷ್ಟ್ರಗಳು ಈ ಜಂಟಿ ಸಮರಾಭ್ಯಾಸವನ್ನು ೨೦೦೫ ರಿಂದ ನಡೆಸಿಕೊಂಡು ಬರುತ್ತಿವೆ.

---

ಕೆನಡಾದ ಮಾಂಟ್ರಿಯಲ್‌ನಲ್ಲಿ ನಡೆಯುತ್ತಿರುವ ಕೆನಡಿಯನ್ ಓಪನ್ ಪುರುಷರ ಟೆನಿಸ್ ಟೂರ್ನಿಯ ಪ್ರೀಕ್ವಾರ್ಟರ್ ಫೈನಲ್ ಪಂದ್ಯದಲ್ಲಿಂದು ಭಾರತದ ಯುಕಿ ಭಾಂಬ್ರಿ ಮತ್ತು ನ್ಯೂಜಿಲ್ಯಾಂಡ್‌ನ ಮೈಕಲ್ ವೀನಸ್ ಜೈಡಿ ಫ್ರಾನ್ಸ್‌ನ ಥಿಯೊ ಅರಿಭಾಜ್ ಮತ್ತು ಅಲ್ಬಾನೊ ಒಲಿವೆಟ್ಟಿ ಜೋಡಿ ವಿರುದ್ಧ ಸೆಣಸಲಿದ್ದಾರೆ. ಈ ಪಂದ್ಯ ಇಂದು ಭಾರತೀಯ ಕಾಲಮಾನ ರಾತ್ರಿ ೧೧.೩೦ಕ್ಕೆ ನಿಗದಿಯಾಗಿದೆ. ನಿನ್ನೆ ನಡೆದ ೩೨ರ ಸುತ್ತಿನ ಪಂದ್ಯದಲ್ಲಿ ಭಾರತ-ನ್ಯೂಜಿಲ್ಯಾಂಡ್‌ನ ಈ ಜೋಡಿ ಬ್ರಿಟನ್‌ನ ನೀಲ್ ಸ್ಕುಪ್‌ಸ್ಕಿ ಮತ್ತು ಅಮೆರಿಕಾದ ಕ್ರಿಶ್ಚಿಯನ್ ಹ್ಯಾರಿಸನ್ ಜೋಡಿ ವಿರುದ್ಧ ಗೆಲುವು ದಾಖಲಿಸಿ ಪ್ರೀಕ್ವಾರ್ಟರ್ ಫೈನಲ್ ಪ್ರವೇಶಿಸಿದೆ.

---

ಕೊಲಂಬೊದಲ್ಲಿ ನಡೆದ ಶ್ರೀಲಂಕಾ ಕ್ರಿಕೆಟ್ ಇಲೆವೆನ್ ವಿರುದ್ಧದ ಮೂರು ದಿನಗಳ ಅಭ್ಯಾಸ ಪಂದ್ಯದ ಅಂತಿಮ ದಿನವಾದ ಇಂದು ಭಾರತದ ಪರ ಯಶಸ್ವಿ ಜೈಸ್ವಾಲ್ ಅವರ ಅರ್ಧ ಶತಕ ಹಾಗೂ ಮೊಹಮ್ಮದ್ ಸಿರಾಜ್ ಅವರ ಬ್ಯಾಟಿಂಗ್ ನೆರವಿನಿಂದ ಭಾರತ ೬ ವಿಕೆಟ್‌ಗಳ ಜಯ ಸಾಧಿಸಿದೆ.

ಶ್ರೀಲಂಕಾ ತನ್ನ ೨ನೇ ಇನ್ನಿಂಗ್ಸ್ ಅನ್ನು ೬ ವಿಕೆಟ್‌ಗಳ ನಷ್ಟಕ್ಕೆ ೨೦೦ ರನ್ ಗಳಿಗೆ ಡಿಕ್ಲೇರ್ ಮಾಡಿಕೊಂಡ ನಂತರ ಭಾರತ ೨೦೭ ರನ್‌ಗಳ ಗುರಿ ಪಡೆದಿತ್ತು. ಪಂದ್ಯದ ಕೊನೆಯ ೨ ಓವರ್‌ಗಳಲ್ಲಿ ಭಾರತಕ್ಕೆ ಗೆಲಲ್ಲು ೨೩ ರನ್‌ಗಳ ಅಗತ್ಯವಿತ್ತು. ಬೌಲರ್ ಮೊಹಮ್ಮದ್ ಸಿರಾಜ್ ಸಮಯೋಚಿತ ಬ್ಯಾಟಿಂಗ್ ಪ್ರದರ್ಶನದೊಂದಿಗೆ ಅಗತ್ಯ ರನ್ ಗಳಿಸಿ ಭಾರತಕ್ಕೆ ಗೆಲುವು ತಂದುಕೊಟ್ಟರು.

___________ ಮುಕ್ತಾಯ __________